**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,**

**ಬ್ಯಾಡಗಿ.**

**ಎಮ್.ವಿ.ಸಿ. ನಂ. 673/2020.**

**ಆರ್ ಡಬ್ಲ್ಯೂ: 2**

| | | |
|---|---|---|
| ಹೆಸರು | : | ಆರ್.ಜಗದೀಶ |
| ತಂದೆಯ ಹೆಸರು | : | ಜಿ.ರುದ್ರಪ್ಪ |
| ವಯಸ್ಸು | : | 53 ವರ್ಷ |
| ಉದ್ಯೋಗ | : | ಎಫ್.ಡಿ.ಎ (ಎ.ಆರ್.ಟಿ.ಓ ರಾಣೇಬೆನ್ನೂರು) |
| ವಾಸಸ್ಥಳ | : | ರಾಣೇಬೆನ್ನೂರು |

**ದಿನಾಂಕ: 30-09-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: 2 ನೇ ಎದುರುದಾರರ ಪರ ಶ್ರೀ ವಿ.ಎಸ್.ಎ ವಕೀಲರಿಂದ:**

ನಾನು ಕಳೆದ 6 ವರ್ಷಗಳಿಂದ ಎ.ಆರ್.ಟಿ.ಓ ರಾಣೆಬೇನ್ನೂರಿನಲ್ಲಿ ಎಫ್.ಡಿ.ಎ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು ಈ ಕೆಳಗಿನ ದಾಖಲೆಗಳನ್ನು ಈ ದಿನ ಹಾಜರು ಪಡಿಸುತ್ತಿದ್ದೇನೆ.

ನಿಆರ್-3ಃ ಅಧಿಕಾರ ಪತ್ರ.

ನಿಆರ್-4ಃ ರೇವಣಪ್ಪ ಹೊಸಮನಿ ರವರ ಮಾಲೀಕತ್ವದ ಮೋಟಾರ್ ಸೈಕಲ್ ನಂ.ಕೆಎ-27 ಇಕೆ-8926 ಗೆ ಸಂಬಂಧಿಸಿದ ಬಿ ರಿಜಿಸ್ಟರ್ ಎಕ್ಸ್‌ಟ್ರ್ಯಾಕ್ಟ

ನಿಆರ್-5ಃ ಬಸವರಾಜ ಎಸ್. ಕಿರವಾಡಿ ರವರ ಡಿಎಲ್ ನ ಎಕ್ಸ್‌ಟ್ರ್ಯಾಕ್ಟ.

ಸದರಿ ನಿಆರ್-5 ರಡಿಯಲ್ಲಿ ಸದರಿ ಡಿಎಲ್ ದಾರಕನಿಗೆ ಎಲ್.ಎಂ.ವಿ ಚಾಲನಾ ಪರವಾನಿಗೆ ಪತ್ರ ದಿನಾಂಕ: 28.12.2006 ರಿಂದ ದಿನಾಂಕ: 27.12.2026 ರವರೆಗೆ

ಚಾಲ್ತಿಯಲ್ಲಿ ಇರುತ್ತದೆ. ಹಾಗೂ ಸದರಿ ನಿಆರ್-5 ರಡಿಯಲ್ಲಿ ಸದರಿ ಡಿಎಲ್ ದಾರಕನಿಗೆ ಸಾರಿಗೆ ವಾಹನ ಚಾಲನಾ ಪರವಾನಿಗೆ ಪತ್ರ ದಿನಾಂಕಃ 30.09.2017 ರಿಂದ ದಿನಾಂಕಃ 29.09.2020 ರವರೆಗೆ ಚಾಲ್ತಿಯಲ್ಲಿ ಇತ್ತು. ಸದರಿ ನಿಆರ್-5 ರಡಿಯಲ್ಲಿ ಡಿಎಲ್ ದಾರಕನಿಗೆ ಮೋಟಾರ್ ಸೈಕಲ್ ಚಾಲನೆ ಮಾಡುವ ಪರವಾನಿಗೆ ಇರಲಿಲ್ಲ.

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಸಿ.ಬಿ.ಕೆ. ವಕೀಲರಿಂದಃ**

ಸದರಿ ನಾನು ಹಾಜರು ಪಡಿಸಿದ ನಿಆರ್-5 ಚಾಲನಾ ಪರವಾನಿಗೆ ಪತ್ರ ಬಸವರಾಜ ಎಸ್ ಕಿರವಾಡಿ ರವರಿಗೆ ಸಂಬಂಧಿಸಿದ ಚಾಲನಾ ಪರವಾನಿಗೆ ಪತ್ರ ಅಲ್ಲ ಎಂದರೆ ಸರಿಯಲ್ಲ. ಎಲ್.ಎಂ.ವಿ ವಾಹನ ಚಾಲನಾ ಪರವಾನಿಗೆ ಪತ್ರ ಹೊಂದಿದ ವ್ಯಕ್ತಿ ಸಾರಿಗೆ ವಾಹನ ಚಾಲನೆ ಮಾಡಬಹುದು ಎಂದರೆ ಸರಿಯಲ್ಲ. ಅದೇರಿ ಎಲ್.ಎಂ.ವಿ ಚಾಲನಾ ಪರವಾನಿಗೆ ಪತ್ರ ಹೊಂದಿದ ವ್ಯಕ್ತಿ ಮೋಟಾರ್ ಸೈಕಲ್ ಚಾಲನೆ ಮಾಡಬಹುದು ಎಂದರೆ ಸರಿಯಲ್ಲ. ಸದರಿ ಬಸವರಾಜ ಎಸ್ ಕಿರವಾಡಿ ರವರಿಗೆ ತೊಂದರೆ ನೀಡಬೇಕೆಂಬ ಉದ್ದೇಶದಿಂದ ಸದರಿಯವನಿಗೆ ಸಂಬಂಧಿಸಿದಲ್ಲದ ಡಿಎಲ್ ಎಕ್ಸಟ್ರ್ಯಾಕ್ ನ್ನು ಸೃಷ್ಟಿಸಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಆತನಿಗೆ ಮೋಟಾರ್ ಸೈಕಲ್ ಚಾಲನೆ ಮಾಡುವ ಪರವಾನಿಗೆ ಪತ್ರ ಇದ್ದರೂ ಸಹ ಇರಲಿಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಾಡಿಗೆಯಿಂದ ಮೋಟಾರ್ ಸೈಕಲ್ ಚಾಲನೆ ಮಾಡುವವರಿಗೆ ಹಾಗೂ ಬಾಡಿಗೆಯಿಂದ ಆಟೋ ಓಡಿಸುವವರಿಗೆ ಲೈಸನ್ಸ ಹೊಂದುವ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ಹಾಗೂ ಆತನಿಗೆ ಲೈಸನ್ಸ ಇರಲಿಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**.)**

ಓ.ಹೇ.ಕೆ.ಸರಿ ಇದೆ.

**Sd/-**

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.